Date : 30-10-2015

# ಎಫ್‌ಸಿಐ ದಾಖಲೆ 7 ಮಿಲಿಯನ್ ಟನ್ ಗೋಧಿ ಮಾರಾಟ ಮಾಡುವ ಸಾಧ್ಯತೆ

ದೊಡ್ಡ ಮಟ್ಟದ ಬಳಕೆದಾರರಿಗೆ ಈ ವರ್ಷ ಎಫ್‌ಸಿಐ 7ಮಿಲಿಯನ್ ಟನ್‌ಗಳಷ್ಟು ಗೋಧಿ ಮಾರಾಟ ಮಾಡುವ ಸಂಭವವಿದೆಯೆನ್ನಲಾಗಿದೆ. ಪ್ರಬಲ ಬೇಡಿಕೆಯಿಂದ ಓಪನ್ ಮಾರ್ಕೆಟ್ ಸ್ಟೇಟ್ ಸ್ಕೀಮ್‌ನನ್ವಯ ಈ ವರ್ಷ ಎಪ್ರಿಲ್‌ನಿಂದ ಎಫ್‌ಸಿಐ ಹೆಚ್ಚುವರಿ ದಾಸ್ತಾನು ಕಡಿತಗೊಳಿಸಲು ಮಾರಾಟ ಪ್ರಾರಂಭಿಸಿದೆ. ಪಂಜಾಬ್, ಹರ್‍ಯಾಣ ಮತ್ತು ಮಧ್ಯಪ್ರದೇಶಗಳಲ್ಲಿ ಕ್ವಿಂ. ಗೆ ರೂ 1550 ದರ ನಿಗದಿಪಡಿಸಲಾಗಿದ್ದು ಇತರ ರಾಜ್ಯಗಳಲ್ಲಿ ಇದರೊಂದಿಗೆ ಫ್ರೈಟ್‌ಚಾರ್ಜ್ ಹೆಚ್ಚುವರಿಯಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ ಬೆಳೆಯಲ್ಲಿ ಎಫ್‌ಸಿಐ 20.08 ಮಿಲಿಯನ್ ಟನ್ ಗೋಧಿ ಖರೀಧಿಸಿದೆಯೆನ್ನಲಾಗಿದೆ. ಇದರಲ್ಲಿ 80 ಶೇಕಡಾ ಖರೀದಿ ಗುಣಮಟ್ಟದ ಶರ್ತ ಸಡಿಲಿಕೆಯಲ್ಲಿ ನಡೆದಿದೆಯೆನ್ನಲಾಗಿದೆ. 2015 ಜೂನ್ 1ಕ್ಕೆ ಎಫ್. ಸಿ. ಐ.ನಲ್ಲಿ 40.35 ಟನ್‌ಗಳಷ್ಟು ಗೋಧಿ ದಾಸ್ತಾನು ಇದೆ ಎನ್ನಲಾಗಿದೆ. ಖಾಸಗಿ ಮೂಲಗಳಲ್ಲಿ ಹಿಂದಿನ ವರ್ಷ ಗುಣಮಟ್ಟದ ಇಳಿಕೆಯಿಂದ ಹೆಚ್ಚಿನ ಮಾಹಿತಿ ನಡೆದಿಲ್ಲವಾದುದರಿಂದ ಗೋಧಿ ದಾಸ್ತಾನು ಇಲ್ಲವೆನ್ನಲಾಗಿದ್ದು ಎಫ್. ಸಿ. ಐ. ಗೋಧಿಗೆ ಬೇಡಿಕೆ ಹೆಚ್ಚಳವಾಗುತ್ತಿದ್ದು, ಈ ವಾರ 1 ಮಿಲಿಯನ್ ಟನ್ ಗೋಧಿ ಮಾರಾಟವಾಗಿದೆ ಎನ್ನಲಾಗಿದೆ. ಎಪ್ರಿಲ್‌ನಿಂದ ಸಪ್ಟೆಂಬರ್ 2015ರ ತನಕ ಓಪನ್ ಮಾರ್ಕೆಟ್ ಸ್ಟೇಟ್ ಸ್ಕೀಮ್ ಅನ್ವಯ 4 ಲಕ್ಷ ಟನ್ ಗೋಧಿ ಮಾರಾಟವಾಗಿದ್ದು, ಅಕ್ಟೋಬರ್‌ನಲ್ಲಿ ಬೇಡಿಕೆ ಹೆಚ್ಚಳವಾಗಿ 9ಲಕ್ಷ ಟನ್ ಗೋಧಿ ಮಾರಾಟವಾಗಿದೆ ಎನ್ನಲಾಗಿದೆ. ಬೇಡಿಕೆ ಹೆಚ್ಚಳವಾಗುತ್ತಿರುವುದರಿಂದ ಈ ವರ್ಷ 7 ಮಿಲಿಯನ್ ಟನ್‌ಗಳಷ್ಟು ಗೋಧಿ ಮಾರಾಟ ಮಾಡುವ ಸಂಭವವಿದೆ ಎಂದು ಆಹಾರ ಸಚೀವಾಲಯದ ಹಿರಿಯ ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ ಎನ್ನಲಾಗಿದೆ. 2014–15 ಎಫ್.ಸಿ.ಐ. 10 ಮಿಲಿಯನ್ ಟನ್ ಮಾರಾಟ ಮಾಡುವ ಗುರಿಯಲ್ಲಿ 4.2 ಮಿಲಿಯನ್ ಟನ್ ಗೋಧಿ ಮಾರಾಟ ಮಾಡಿದೆ ಮತ್ತು ಹಿಂದಿನ ವರ್ಷ 6.4 ಮಿಲಿಯನ್ ಟನ್ ಗೋಧಿ ಮಾರಾಟ ಮಾಡಿದೆನ್ನಲಾಗಿದೆ.